ಶ್ರೀ ತಿಪ್ಪೇಸ್ವಾಮಿ(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):- (ಅ) ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಲೋಕೋಪಯೋಗಿ ಉಪ ವಿಭಾಗಗಳನ್ನು ತೆರೆದು ಕಟ್ಟಡ ಮತ್ತು ರಸ್ತೆ ಕಾಮಗಾರಿಗಳ ಜೊತೆಗೆ ಸಣ್ಣ ನೀರಾವರಿ ಕಾಮಗಾರಿಗಳನ್ನೂ ಸಹ ನಿರ್ವಹಿಸಬೇಕೆಂಬ ಉದ್ದೇಶದಿಂದ ನೀರಾವರಿ ಇಲಾಖೆಯಲ್ಲಿದ್ದ 59 ಸಣ್ಣ ನೀರಾವರಿ ಉಪ ವಿಭಾಗಗಳನ್ನು ಲೋಕೋಪಯೋಗಿ ಉಪ ವಿಭಾಗಗಳನ್ನಾಗಿ ಜುಲೈ 1994ರಿಂದ ಪರಿವರ್ತಿಸಿ, ವಿಲೀನಗೊಳಿಸಲಾಯಿತು.

ಆದರೆ, ಸಣ್ಣ ನೀರಾವರಿ ಕಾಮಗಾರಿಗಳ ಅನುಷ್ಠಾನ ಹಾಗೂ ನಿರ್ವಹಣೆಯು ಕುಂಠಿತಗೊಂಡಿತು ಹಾಗೂ ಅನೇಕ ಆಡಳಿತಾತ್ಮಕ ಸಮಸ್ಯೆಗಳು ಉದ್ಭವಿಸಿದವು. ಆದ್ದರಿಂದ ಜುಲೈ 94ರಲ್ಲಿ ಲೋಕೋಪಯೋಗಿ ಇಲಾಖೆಯ ಉಪ ವಿಭಾಗಗಳಾಗಿ ಪರಿವರ್ತನೆಗೊಂಡಿದ್ದ 59 ಸಣ್ಣ ನೀರಾವರಿ ಉಪ ವಿಭಾಗಗಳನ್ನು ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸಿ ನೀರಾವರಿ ಇಲಾಖೆಯಲ್ಲಿ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಮುಂದುವರೆಸಲು ಲೋಕೋಪಯೋಗಿ ಇಲಾಖೆಯು ದಿನಾಂಕ: 23-5-1996 ಹಾಗೂ ನೀರಾವರಿ ಇಲಾಖೆಯು ದಿನಾಂಕ: 29-5-1996ರಂದು ಆದೇಶ ಹೊರಡಿಸಲಾಗಿದೆ.

(ಆ) ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸಿ ಸಣ್ಣ ನೀರಾವರಿ ಉಪ ವಿಭಾಗಗಳನ್ನಾಗಿ ಮುಂದುವರೆಸಲು ಆದೇಶಿಸಲಾಗಿರುವ 59 ಸಣ್ಣ ನೀರಾವರಿ ಉಪ ವಿಭಾಗಗಳ ಪೈಕಿ ಈಗಾಗಲೇ 20 ಸಣ್ಣ ನೀರಾವರಿ ಉಪ ವಿಭಾಗಗಳು ಕಾರ್ಯಾರಂಭ ಮಾಡಿದೆ ಎಂದು ಅಧಿಸೂಚನೆಗಳನ್ನು ಹೊರಡಿಸಿವೆ. ಆದರೆ ನಂತರ ಲೋಕೋಪಯೋಗಿ ಇಲಾಖೆಯು ದಿನಾಂಕ:23-5-96ರ ಆದೇಶವನ್ನು ತಡೆಹಿಡಿದಿದೆ.

(ಇ) ಹೊಸನಗರದಲ್ಲಿದ್ದ ಲೋಕೋಪಯೋಗಿ ಉಪ ವಿಭಾಗವನ್ನು ಸಣ್ಣ ನೀರಾವರಿ ಉಪ ವಿಭಾಗವನ್ನಾಗಿ ಪರಿವರ್ತಿಸಿ ಅದೇ ಸ್ಥಳದಲ್ಲಿ ಮುಂದುವರೆಸಲಾಗಿದೆ. ಶಿಕಾರಿಪುರ ತಾಲ್ಲೂಕಿನಲ್ಲಿರುವ ಕಾಮಗಾರಿಗಳನ್ನು ಈ ಉಪ ವಿಭಾಗದ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಆದ್ದರಿಂದ ಶಿಕಾರಿಪುರದಲ್ಲಿ ಪ್ರತ್ಯೇಕ ಸಣ್ಣ ನೀರಾವರಿ ಉಪ ವಿಭಾಗವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿಲ್ಲ.

ವಿಷಯ:- ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ರೀಕನ್ವೆ ಮಾಡಲಾದ ನಿವೇಶನಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 108(206)

ಶ್ರೀ ಬಿ.ಎಸ್.ಯಡಿಯೂರಪ್ಪ(ಶಿಕಾರಿಪುರ):- ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಬೆಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಸ್ವಾಧೀನ ಪಡಿಸಿಕೊಂಡಿದ್ದ ಎಷ್ಟು ನಿವೇಶನಗಳನ್ನು; ಜಮೀನುಗಳನ್ನು ಭೂ ಮಾಲೀಕರಿಗೆ ವಾಪಸ್ಸು (ರೀಕನ್ವೆ) ಮಾಡಿರುತ್ತದೆ.

ಆ) ಕಳೆದ 5 ವರ್ಷಗಳಲ್ಲಿ ಈವರೆಗೆ ವಾಪಸ್ಸು ಮಾಡಿರುವ ಪ್ರಕರಣಗಳ ವಿವರಗಳನ್ನು ನೀಡುವುದು;

ಇ) ವಾಪಸ್ಸು ಮಾಡಿದ ಜಮೀನಿನ ಭೂ ಸ್ವಾಧೀನ ಶುಲ್ಕವನ್ನು ಭೂಮಾಲೀಕರಿಂದ ವಸೂಲು ಮಾಡಲಾಗಿದೆಯೇ?

ಈ) ಜಮೀನು ವಾಪಸ್ಸು ಕೊಡುವ ಸಂದರ್ಭದಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಅನಂತನಾಗ್(ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು):- (ಅ) ಈಗಾಗಲೇ ಒಟ್ಟು 15,215 ನಿವೇಶನಗಳನ್ನು ರೀಕನ್ವೆ ಮಾಡಿದೆ ಹಾಗೂ ಸ್ವಾಧೀನ ಪತ್ರಗಳನ್ನು ನೀಡಲಾಗಿದೆ.

(ಆ) ರಾಜ್ಯ ಉಚ್ಚ ನ್ಯಾಯಾಲವು 1986ರಲ್ಲಿ ರೀಕನ್ವೆಮಾಡುವ ಕ್ರಮವನ್ನು ರದ್ದುಪಡಿಸಿದ ಕಾರಣದಿಂದ ದಿನಾಂಕ: 8-5-86ರಿಂದ ದಿನಾಂಕ: 31-3-94ರವರೆಗೆ ಈ ಬಗ್ಗೆ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಿವೇಶನಗಳನ್ನು ರೀಕನ್ವೆ ಮಾಡಲು ಅನುವಾಗುವಂತೆ ಕಲಂ 38 ಪಿ.ಯಡಿಯಲ್ಲಿ ಕಾಯ್ದೆಗೆ ದಿನಾಂಕ: 31-3-1991ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿದೆ. ಕಾಯ್ದೆಗೆ ತಿದ್ದುಪಡಿ ಮಾಡಿದ ದಿನಾಂಕದಿಂದ ಅಂದರೆ ದಿನಾಂಕ: 31-3-94ರಿಂದ 2518 ಪ್ರಕರಣಗಳಲ್ಲಿ ರೀಕನ್ವೆಮಾಡಲಾಗಿದೆ.

(ಇ) ಹೌದು -

(ಈ) ಯಾವುದೇ ನಿರ್ದಿಷ್ಟ ದೂರುಗಳು ಬಂದಿರುವುದಿಲ್ಲ.

ಅಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಮೂರನೇ ಪಟ್ಟಿಯ ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕಾವೇರಿ ನೀರಿನ ವಿಚಾರದಲ್ಲಿ ಅವರ ಪಕ್ಷದ ಮೀಟಿಂಗ್‌ನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡು ಅವರ ಪಕ್ಷದ ಸೆಕ್ರೇಟರಿಯವರು ಈಗಾಗಲೇ ಅನೌನ್ಸ್ ಮಾಡಿದ್ದಾರೆ, ಏನೆಂದರೆ "Chief Minister J.H.Patel has decided to release 5 TMC of water to Tamil Nadu as against the demand of 15 TMC of water from them. Mr. Patel said, during July the State needed to release 48 TMC of water. In view of the poor storage of water levels in the reservoirs, the State would be able to release only 5 TMC". . . . ಇಲ್ಲಿ ಅವರು ರಿಲೀಸ್ ಮಾಡಿ ಎಂದು ಹೇಳಿ ಸದನದಲ್ಲಿ ರೆಫ್ಯೂಸ್ ಮಾಡುತ್ತೇನೆ ಎಂದು ಹೇಳಿದರೆ It is breach of privilege. ನೀರು ಎಷ್ಟು ಬಿಟ್ಟಿದ್ದಾರೆ ಎಂದರೆ ಅವರು ಹೇಳಲು ತಯಾರಾಗಿಲ್ಲ. ಬಿಡುತ್ತಿರುವ ನೀರನ್ನು ಸ್ಟಾಪ್ ಮಾಡಿ ಎಂದರೆ ಅದಕ್ಕೂ ತಯಾರಿಲ್ಲ. ಒಂದು ಕಡೆ ಸ್ಟೇಟ್‌ಮೆಂಟ್ ಕೊಡುತ್ತಾರೆ, ಮಾನ್ಯ ಅಧ್ಯಕ್ಷರ ಗಮನಕ್ಕೆ ಅದನ್ನು ತರುತ್ತೇನೆ, ತಾವು ಅದನ್ನು ನೋಡಬಹುದು. ನೀರು ಬಿಡುತ್ತೇವೆಂದು ಹೇಳಿದ್ದಾರೆ, ಎಷ್ಟು ಎಂದರೆ ಹೇಳುವುದಿಲ್ಲ. . . . .

ಅಧ್ಯಕ್ಷರು:- ಶ್ರೀಶೈಲಪ್ಪ ಬಿದರೂರು ಇವರು ವಿಷಯ ಸಮಿತಿಯ ವರದಿಯನ್ನು ಒಪ್ಪಿಸುವುದು.

(ಗೈರು ಹಾಜರು)